ಕರ್ನಾಟಕ ರಾಜ್ಯದ ಪಂಚಾಯಿತಿಗಳ ತೆರಿಗೆ ವಸೂಲಿ ಮತ್ತು ಅನುದಾನ ನೀಡುವ ಬಗ್ಗೆ

127 ಶ್ರೀ ಬೈರಪ್ಪಾಜಿ (ತುರುವೆಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) 1978-79 ರಿಂದ 1981-82ರವರೆಗಿನ ನಾಲ್ಕು ವರ್ಷಗಳ ಅವಧಿಯಲ್ಲಿ ರಾಜ್ಯದ ಪಂಚಾಯತಿಗಳಿಂದ ವಸೂಲಿ ಮಾಡಿರುವ ತೆರಿಗೆಯ ನೊತ್ತವೆಷ್ಟು ;

ಆ) ಪಂಚಾಯತಿಗಳು ವಸೂಲಿ ಮಾಡಿದ ತೆರಿಗೆಗೆ ಅನುಗುಣವಾಗಿ ಸರಕಾರದಿಂದ ಹೊಂದಿಕೆಯ ಅನುದಾನ ಸರ್ಕಾರ ಆಜ್ಞೆ ಏನಾದರೂ ಇದೆಯೇ ;

ಇ) ಕಳೆದ ನಾಲ್ಕು ವರ್ಷಗಳಿಂದ ಸರ್ಕಾರದ ಆದೇಶ ಅನುಷ್ಠಾನಕ್ಕೆ ಬಂದಿದೆಯೇ ;

ಈ) ಸರಕಾರಿ ಆಜ್ಞೆ ಕಾರ್ಯರೂಪಕ್ಕೆ ಬರದಿರಲು ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆ ಮತ್ತು ಪಂಚಾಯಿತ್ ರಾಜ್ ಮಂತ್ರಿಗಳು):— ಅ) ಒಟ್ಟು 13, 85, 69, 694-00 ರೂಗಳು. ವಸೂಲಿ ಮಾಡಿರುವ ತೆರಿಗೆಯ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿರುತ್ತೆ.

ಆ) ಹೌದು.

ಇ) ಹೌದು.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ 1978–79 ರಿಂದ 1981–82 ರವರೆಗಿನ ನಾಲ್ಕು ವರ್ಷಗಳಲ್ಲಿ ವಸೂಲಿ ಮಾಡಿದ ತೆರಿಗೆಗಳ ವಿವರ

Divisions/ವಿಭಾಗಗಳು		1978-79	1979–80	1980–81	ರೂಗಳ 1981–82
Mysore/ಮೈಸೂರು		99,37,972-00	90,87,300-00	91,93,504-00	1,28,83,722-00
Belgaum/ಬೆಳಗಾಂ		91,30,974-00	95,35,581-00	1,07,84,834-00	1,42,72,601-00
Bangalore/ಬೆಂಗಳೂರು		67,22,362-00	83,44,101-00	92,51,044-00	1,12,94,221-00
Gulbarga/ಗುಲ್ಬರ್ಗಾ		44,41,676-00	45,88,543-00	33,41,260-00	57,60,059-00
	ಮೊತ್ತ	3,02,32,924-00	3,15,55,525-00	3,25,70,642-00	4,42,10,603-00

ಸಾಲಗಳ ವರ್ಷ	ತೆರಿಗೆ ವಸೂಲಿ ಮಾಡಿದ ಮೊಬಲಗು
1978–79	3,02,32,924-00
1979–80	3,15,55,525-00
1980–81	3,25,70,642-00
1981–82	4,42,10,603 00
	13,85,69,694-00

ಶ್ರೀ ಬಿ. ಬೈರಪ್ಪಾಜಿ :—ಪಂಚಾಯಿತಿಯವರು ಎಷ್ಟು ವಸೂಲು ಮಾಡುತ್ತಾರೋ ಅಷ್ಟು ಅನುದಾನವನ್ನು ಅಥವಾ ಸಹಾಯವನ್ನು ಸರ್ಕಾರ ಕೊಡಬೇಕೆಂದು ಸರ್ಕಾರಿ ಆಜ್ಞೆ ಇದೆ ಎಂದು ತಾವು ಹೇಳಿದ್ದೀರಿ. ಸುಮಾರು 13 ಕೋಟಿ 85 ಲಕ್ಷ ರೂಪಾಯಿಗಳನ್ನು ಪಂಚಾಯಿತಿಯವರು ನಾಲ್ಕು ವರ್ಷದಲ್ಲಿ ವಸೂಲು ಮಾಡಿದ್ದಾರೆ. ಅದಕ್ಕನುಗುಣವಾಗಿ ಸರ್ಕಾರ ಹಣವನ್ನು ಪಂಚಾಯಿತಿಗಳಿಗೆ ಕೊಟ್ಟಿದೆಯೇ ?ಕೊಡದೆ ಇದ್ದರೆ ಅದಕ್ಕೆ ಕಾರಣ ಏನು ; ಸುತ್ತು ಕೊಟ್ಟಿದ್ದರೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್ —ಒಟ್ಟು ವಸೂಲಾಗಿರುವುದನ್ನು ಇಲ್ಲಿ ಕೊಟ್ಟಿದ್ದೇವೆ. ಆದರೆ ತೀಕಡ 25ರಷ್ಟು ವಸೂಲಾತಿ ಮಾಡದರೆ ಅನುದಾನ ಸಿಗುವುದಿಲ್ಲ. ಸಮತೋಲನ ಅನುದಾನ ಸಿಗಬೇಕಾಗಿದ್ದರೆ ತೀಕಡ 50ರಷ್ಟು ಯಾರು ವಸೂಲಾತಿ ಮಾಡಿರುತ್ತಾರೋ ಅಂಥವರಿಗೆ ಸಿಗುತ್ತದೆ. ಆದರ ಪ್ರಕಾರ ಬಜೆಟ್‌ನಲ್ಲಿದ್ದ 1 ಕೋಟಿ ರೂಪಾಯಿ ಹಣವನ್ನು ಪಂಚಾಯಿತಿಗಳಿಗೆ ಕೊಟ್ಟಿದ್ದೇವೆ. ಇನ್ನೂ 4 ಕೋಟಿ ರೂಪಾಯಿಗಳನ್ನು ಪಂಚಾಯಿತಿಯವರಿಗೆ ಕೊಡಬೇಕು. ಈಗಾಗಲೇ ಈ ವಿಷಯವನ್ನು ನಮ್ಮ ಇಲಾಖೆಯವರು ಅರ್ಥಖಾತೆಗೆ ಕಳುಹಿಸಿದಾರೆ. ಅರ್ಥಖಾತೆಯ ಸುಂಜೂರಾತಿ ದೊರೆತ ನಂತರ ಹಣವನ್ನು ಪಂಚಾಯತಿಗೆ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ :—ಮಾರ್ಚ್ 31ಕ್ಕೆ ಹಣಕಾಸಿನ ವರ್ಷ ಮುಗಿಯುತ್ತದೆ. ಇನ್ನು 8 ದಿನಸಗಳಿವೆ. ಈ ೮ ದಿನಸದಲ್ಲಿ ಹಣ ಪಡೆದು ಡಿವಿಷನಲ್ ಕಮಿಷನರಿಗೆ ಕಳುಹಿಸಿ ಪಂಚಾಯಿತಿಯವರಿಗೆ ಕೊಡುವುದು ಯಾವಾಗ ? 50 ಪರ್ಸೆಂಟ್ ವಸೂಲಾತಿ ಯಾರು ಮಾಡುತ್ತಾರೋ ಅಂಥ ಪಂಚಾಯಿತಿಗಳಿಗೆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತೇನೆಂದು ಹೇಳಿದ್ದೀರಿ.ಹಿಂದೆ ಆರ್ಡರ್ ಆಗಿರುವ ಪ್ರಕಾರ ಅದನ್ನು ಕೊಡುತ್ತೀರಿ. 4ಕೋಟಿ ರೂಪಾಯಿ ಹಣ ಪಂಚಾಯಿತಿಗಳಿಗೆ ಕೊಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇನೆಂದು ಹೇಳಿದ್ದೀರಿ. ಅದು ಸರ್ಕಾರದಿಂದ ಸುಂಜೂರಾತಿಯಾಗಿ ಬರುವಹೊತ್ತಿಗೆ ಮಾರ್ಚ್31 ಮುಗಿದುಹೋಗುತ್ತದೆ. ಆನಂತರ ಹಣ ಲ್ಯಾಪ್ಸ್ ಆಗುತ್ತದೆ. ಇದರಿಂದ ಪಂಚಯಿತಿಗಳು ತೊಂದರೆಗೀಡಾಗುತ್ತವೆ. ಆದರಿಂದ ತಕ್ಷಣ ಬಂದೆರಡು ದಿನಸಗಳಲ್ಲೇ ಹಣ ರಿಲೀಸ್ ಮಾಡಿ ಎಲ್ಲಾ ಪಂಚಾಯಿತಿಗಳಿಗೆ ವಿತರಣೆ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಅಬ್ದುಲ್ ನಜೀರ್ ಸಾಬ್ —1978-79ರಿಂದ ಈ ಸಮಸ್ಯೆ ಹಾಗೇ ಇದೆ. 1978-79, 1979-80, 1980-81, ಮತ್ತು 1981-82ರಲ್ಲಿ 5 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದ್ದು ಆಗಿನಿಂದಲೂ 1 ಕೋಟಿ ರೂಪಾಯಿ ಮಾತ್ರ ಕೊಟ್ಟಿದೆ. ಇನ್ನು 4 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದ ಪರಿಶೀಲನೆ ನಡೆಯುತ್ತಿದೆ. ಈ ಹಣವನ್ನು ಕೊಡಬೇಕೆಂಬ ಸುನೋಭಾನವನ್ನು ನಾನು ಅರ್ಥಖಾತೆಯಿಂದ ಸುಂಜೂರಾಗಿ ಬಂದರೆ ಸುಂದಿನ ಏಪ್ರಿಲ್‌ನಲ್ಲೂ ಈ ಹಣ ಕೊಡುವುದಕ್ಕೆ ಬರುತ್ತದೆ.

ಶ್ರೀ ಬಿ. ಬೈರಪ್ಪಾಜಿ :—ಪಂಚಾಯಿತಿಯವರು ಸರಿಯಾದ ರೀತಿಯಲ್ಲಿ ಹಣ ಇಲ್ಲನೆ ಕೆಲಸ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದರೂ ಕೂಡ ಹಣ ಕೊಡುವ ಬಗ್ಗೆ ಏತಕ್ಕೆ ಗಮನ ಕೊಟ್ಟಿಲ್ಲ ? 4 ಕೋಟಿ ರೂಪಾಯಿ ಎಂದರೆ ಕಡಿಮೆಯೇನಲ್ಲ. ಪಂಚಾಯಿತಿಗಳಿಗೆ 4 ಕೋಟಿ ಹಣವನ್ನು ಕೊಟ್ಟಿದ್ದರೆ ಕನಿಷ್ಠ ಪಕ್ಷ ಅವರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೇ ? ಆದರಿಂದ ಮಾರ್ಚ್ ಮುಗಿಯುವುದರೊಳಗೆ ಈ ಹಣ ಪಂಚಾಯಿತಿಗಳಿಗೆ ಸಿಗುವಂತೆ ಮಾಡಿ ಅವು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ತಾವೇನಾದರೂ ಕಾರ್ಯಕ್ರಮ ಕ್ಕೆ ಗೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್ —ನಾನು ಮೊದಲೇ ಹೇಳಿದೆ, – ಇದು ಸುಮಾರು ನಾಲ್ಕು ವರ್ಷಗಳಿಂದ ಕರೆಸ್ಪಾಂಡೆನ್ಸ್‌ನಲ್ಲಿದ ವಿಷಯ ಎಂದು. ನನ್ನ ಖಾತೆಯಿಂದ 1979ರಲ್ಲೇ ಈ ಹಣವನ್ನು ಪಂಚಾಯಿತಿಗಳಿಗೆ ಕೊಡಬೇಕೆಂದು ಆಜ್ಞೆ ಮಾಡಿದೆ. ಆದರ ಪ್ರಕಾರ ಸಮತೋಲನ ಅನುದಾನ ಕೊಡಬೇಕೆಂದು ಅರ್ಥಖಾತೆಗೆ ಶಿಫಾರಸ್ಸು ಮಾಡಲಾಗಿದೆ. ತತ್ಪಕ್ಷಣ ನಾವು ಕೊಡುವುದಕ್ಕೆ ಒಪ್ಪಿದ್ದೇವೆ. ಕೊಡುವಂಥ ಪ್ರಯತ್ನಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :—4 ವರ್ಷದಲ್ಲಿ 13 ಕೋಟಿ 80 ಲಕ್ಷ ರೂಪಾಯಿಗಳು ವಸೂಲಾಗಿದೆ. ಈ ಹಣದಲ್ಲಿ ಪಂಚಾಯಿತಿಗಳಿಂದ ಬರಬೇಕಾದ್ದು ಎಷ್ಟು ? ಎಷ್ಟೇ ಪಂಚಾಯಿತಿಗಳಲ್ಲಿ ಬಂದು ಸೇರಿಕೊಡ ವಸೂಲಾಗದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಂಥ ಪಂಚಾಯಿತಿಗಳ ವಿರುದ್ಧ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್ —ಆ ಬಗ್ಗೆ ನನಗೆ ಗೊತ್ತಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.